# ಜ್ಯೋತಿಷ ಮಿತ್ರ

## ಡಿಜಿಟಲ್ ದಿನಪತ್ರಿಕೆ

www.jyothishamithra.com

ಸಂಚಿಕೆ : 387    17-7-2026    ಶುಕ್ರವಾರ

## ನಿತ್ಯ ಪಂಚಾಂಗ

ಪರಾಭವ ಸಂವತ್ಸರ ದಕ್ಷಿಣಾಯನ ಗ್ರೀಷ್ಮಋತು

ಆಷಾಢಮಾಸ ಶುಕ್ಲಪಕ್ಷ

ತಿಥಿ : ತದಿಗೆ(6:27) ನಕ್ಷತ್ರ : ಮಘಾ(18:33)

ರಾಹುಕಾಲ : 11:00 AM - 12:36 PM

ಗುಳಿಕಕಾಲ : 07:48 AM - 09:24 AM

## ಸುಜ್ಞಾನ

ಹಾಲಿನ ಜೊತೆ ಸೇರಿದ ನೀರು ಹಾಲಾಗುತ್ತದೆ... ಹಾಗೇ, ಗುಣವಂತರ ಆಶ್ರಯ ಪಡೆದ ಗುಣಹೀನನು ಗುಣವಂತನಾಗುತ್ತಾನೆ...




ಪಾದರಸ ಶಿವಲಿಂಗದ ದರ್ಶನದಿಂದ ಕೇದಾರಾದಿ ಸಕಲ ತೀರ್ಥಕ್ಷೇತ್ರ ಗಳಲ್ಲಿರುವ ಶಿವಲಿಂಗಗಳನ್ನು ದರ್ಶನ ಮಾಡಿದರೆ ಎಷ್ಟು ಪುಣ್ಯ ಬರುತ್ತದೊ ಅಷ್ಟೇ ಪುಣ್ಯ ಬರುವದು.

ಪಾದರಸ ಲಿಂಗ ಪೂಜೆಯಿಂದ ಅಥವಾ ಧಾರಣೆಯಿಂದ ನೂರು ಅಶ್ವಮೇದ ಯಾಗದ ಫಲವನ್ನು ಅಥವಾ ಸ್ವರ್ಣದಿಂದ ಮಾಡಲ್ಪಟ್ಟ ಒಂದು ಕೋಟಿ ಗೋವುಗಳನ್ನು ದಾನಮಾಡಿದ ಪುಣ್ಯವನ್ನು ಸರ್ವ ಸುಕ್ಷೇತ್ರ ತೀರ್ಥಗಳಲ್ಲಿ ಸ್ನಾನ ಮಾಡಿದಂಥ ಫಲವನ್ನು ಪಡೆಯುವರು.

ಪಾದರಸ ಲಿಂಗವನ್ನು ಸ್ಪರ್ಶನ-ದರ್ಶನ ಮಾಡುವುದರಿಂದಲೂ, ಧ್ಯಾನಿಸುವುದರಿಂದಲೂ, ಪೂಜೆಯನ್ನು ಮಾಡುವುದರಿಂದಲೂ ಪೂರ್ವಜನ್ಮ ಸಂಬಂಧ ಘಾತಕ ಪಾಪ ದೋಷಗಳು ನಾಶವಾಗುವವು. ಹಾಗೂ ಈ ಜನ್ಮದಲ್ಲಿ ಮಾಡಿರುವ ಪಾಪದೋಷಗಳು ಪರಿಹಾರ ವಾಗುವವು.






***"ಜ್ಯೋತಿಷ ಶಾಸ್ತ್ರದಲ್ಲಿ ಗುರುವನ್ನು ಜೀವಕಾರಕ ಎನ್ನುತ್ತಾರೆ. ಗುರುವೊಬ್ಬನು ಚೆನ್ನಾಗಿದ್ದರೆ ಆ ಜಾತಕದವರಿಗೆ ಜೀವನ ನಿರ್ವಹಣೆಗೆ ಯಾವುದೇ ತೊಂದರೆ ಇರುವುದಿಲ್ಲ. ಗುರು ಎಂದಿಗೂ ಕಂಡಾಪಟ್ಟೆ ದುಡ್ಡು, ಶ್ರೀಮಂತಿಕೆ ಕೊಡುವುದಿಲ್ಲ. ನಮಗೆ ಎಷ್ಟು ಆವಶ್ಯಕತೆ ಇದೆಯೋ ಅಷ್ಟೇ ಕೊಡುತ್ತಾನೆ. ಆದರೆ ವಿದ್ಯೆ, ಕೀರ್ತಿ, ಗೌರವಗಳನ್ನು ಹೇರಳವಾಗಿ ನೀಡುತ್ತಾನೆ."***

# ಏನೇ ಸಂಪಾದಿಸಿದರೂ ಅದು ಸತ್ಯ ನ್ಯಾಯದಿಂದ ಕೂಡಿರುತ್ತದೆ

ಹಂಸಯೋಗವೆನ್ನುವುದು ಜಾತಕದಲ್ಲಿ ಗುರುವಿನಿಂದ ಉಂಟಾಗುವ ಒಂದು ಯೋಗ. ಈ ಯೋಗದ ಜಾತಕದವರು ಕೀರ್ತಿವಂತರೂ, ಯಶೋವಂತರೂ, ಜ್ಞಾನಿಗಳೂ, ವಿದ್ವಾಂಸರೂ ಆಗಿರುತ್ತಾರೆ. ಮಠಾಧಿಪತಿಗಳಾಗಿರಬಹುದು, ಧರ್ಮಾಧಿಕಾರಿಗಳಾಗಿರಬಹುದು ಅವರು ವಿದ್ಯಾಸಂಸ್ಥೆಗಳನ್ನು ಕಟ್ಟಿ ನಡೆಸಬಹುದು, ಅಪಾರ ಧರ್ಮಕಾರ್ಯಗಳನ್ನು ಮಾಡಬಹುದು. ಒಟ್ಟಿನಲ್ಲಿ ಸಮಾಜದಲ್ಲಿ ಗೌರವಾನ್ವಿತರಾಗಿ ಬಾಳುತ್ತಾರೆ. ವಾಮಮಾರ್ಗದಲ್ಲಿ ಹಣ ಸಂಪಾದನೆಯನ್ನು ಈ ಯೋಗದವರು ಮಾಡುವುದಿಲ್ಲ. ಏನೇ ಸಂಪಾದಿಸಿದರೂ ಅದು ಸತ್ಯ ನ್ಯಾಯದಿಂದ ಕೂಡಿರುತ್ತದೆ. ತಮ್ಮದಲ್ಲದ ಒಂದು ರೂಪಾಯಿಗೂ ಇವರು ಆಸೆ ಪಡುವುದಿಲ್ಲ.




ಒಳ್ಳೆಯ ಕೆಲಸ ಮಾಡಲು ಗುರುಬಲ ಇರಬೇಕು ಎನ್ನುತ್ತಾರೆ. ಮದುವೆ, ಮುಂಜಿ, ಗೃಹಪ್ರವೇಶ.... ಯಾವುದೇ ಶುಭಕಾರ್ಯ ಮಾಡಬೇಕೆಂದರೂ ಗುರುಬಲ ಇರಬೇಕು. ಈ ವರ್ಷ ಗುರುಬಲ ಇದೆ. ನಿಮಗೆ ಏನೋ

ಒಳ್ಳೆದಾಗುತ್ತದೆ ಅನ್ನುತಾರೆ. ಗಮನಿಸಿದ್ದೀರ ತಾನೆ? ಜ್ಯೋತಿಷ್ಯ ಹೇಳುವಾಗ- ಈ ಸಲ ಗುರುಬಲ ಇಲ್ಲ ನಿನಗೆ ಯಾವ ಕೆಲಸವೂ ಕೈಗೆ ಹತ್ತಲ್ಲ. ನಿಧಾನ ಆಗುತ್ತದೆ ಎನ್ನುತ್ತಾರೆ. ಯಾಕೆ ಹೀಗೆ? ಗುರುವಿಗೂ, ನಮ್ಮ ಅದೃಷ್ಟಕ್ಕೂ ಏನು ಸಂಬಂಧ? ಜಾತಕದಲ್ಲಿ ಗುರುವನ್ನು ಜೀವಕಾರಕ ಎನ್ನುತ್ತಾರೆ. ಗುರುವೊಬ್ಬನು ಚೆನ್ನಾಗಿದ್ದರೆ ಆ ಜಾತಕದವರಿಗೆ ಜೀವನ ನಿರ್ವಹಣೆಗೆ ಯಾವುದೇ ತೊಂದರೆ ಇರುವುದಿಲ್ಲ. ಗುರು ಒಂದು ರಾಶಿಯಲ್ಲಿ ಒಂದು ವರ್ಷ ನೆಲೆಸಿರುತ್ತಾನೆ. ಹೀಗಾಗಿ ಗುರುವಿನ ಸಂಚಾರ ಗೋಚಾರದಲ್ಲಿ ಬಹಳ ಮುಖ್ಯ.




ಜ್ಯೋತಿಷ ಮಿತ್ರ ಆನ್ಲೈನ್ ದಿನಪತ್ರಿಕೆ

ಗೌರವ ಸಂಪಾದಕರು : ಜೀವನ್ ಉಳ್ಳಾಲ್ | ಸಂಪಾದಕರು : ಶ್ರೀಷ ಎಸ್. | ಕಚೇರಿ ವಿಳಾಸ: ಕತ್ತಾರ್ ಕಾಂಪ್ಲೆಕ್ಸ್, ಹೊಸಬೆಟ್ಟು, ಮಂಗಳೂರು-575019. | ಸಂಪರ್ಕಿಸಿ 9986671473 / 9535283535

www.jyothishamithra.com